ತಾಂತ್ರಿಕ ಶಿಕ್ಷಣ ನಿರ್ದೇಶಕರು, ಕರ್ನಾಟಕ, ಬೆಂಗಳೂರು ಇವರ ಕಚೇರಿ ನಡವಳಿಗಳು

ವಿಷಯ: ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿರುವ ಈ ಕೆಳಕಂಡ ಖಾಸಗಿ ಅನುದಾನಿತ ಸಂಸ್ಥೆಗಳ ಸಿಬ್ಬಂದಿ ವರ್ಗದವರಿಗೆ 'ಸ್ಟೇಟ್ ಬ್ಯಾಂಕ್ ಆಫ್ ಮೈಸೂರು' ಮೂಲಕ ನೇರವಾಗಿ ಮೇ 2013 ರ ಮಾಹೆಯ ಸರ್ಕಾರದ ಪಾಲಿನ ವೇತನವನ್ನು ವಿತರಿಸಲು ಅನುಕೂಲವಾಗುವಂತೆ ಯೋಜನೇತರ ಅಡಿಯಲ್ಲಿ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ:
1) ಸರ್ಕಾರಿ ಆದೇಶ ಸಂಖ್ಯೆ: ಇಡಿ/55/ಟಿಜಿಎಲ್/64, ದಿ: 29-10-1966.
2) ಸರ್ಕಾರಿ ಆದೇಶ ಸಂಖ್ಯೆ: ಇಡಿ/184/ಟಿಪಿಇ 2009, ದಿ: 27.07.2009
3) ಸರ್ಕಾರಿ ಆದೇಶ ಸಂಖ್ಯೆ: ಇಡಿ /184/ಟಿಪಿಇ/ 2009, ದಿ: 02.03.2010
4) ಸರ್ಕಾರಿ ಆದೇಶ ಸಂಖ್ಯೆ: ಇಡಿ /184/ಟಿಪಿಇ/ 2009, ದಿ: 14-05-2010
5) ಸರ್ಕಾರಿ ಆದೇಶ ಸಂಖ್ಯೆ: ಇಡಿ /184/ಟಿಪಿಇ/ 2009, ದಿ: 14-03-2011

*****

ಪ್ರಸ್ತಾವನೆ:-

ಉಲ್ಲೇಖ(2)ರ ಸರ್ಕಾರದ ಆದೇಶದಲ್ಲಿ ಸರ್ಕಾರವು ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿರುವ ಖಾಸಗಿ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳು ಹಾಗೂ ಪಾಲಿಟೆಕ್ನಿಕ್‌ಗಳ ಸಿಬ್ಬಂದಿಗಳಿಗೆ ಸರ್ಕಾರದಿಂದ ಬಿಡುಗಡೆ ಮಾಡುವ ಶೇ.85 ರಷ್ಟು ವೇತನವನ್ನು ಹಾಗೂ ಸಂಬಂಧಪಟ್ಟ ಸಂಸ್ಥೆಗಳು ನೀಡಬೇಕಾಗಿರುವ ಶೇ.15ರಷ್ಟು ವೇತನವನ್ನು ಪ್ರತೀ ತಿಂಗಳು ರಾಷ್ಟ್ರೀಕೃತ ಬ್ಯಾಂಕ್‌ಗೆ ಜಮೆ ಮಾಡುವ ಮೂಲಕ ಸಿಬ್ಬಂದಿ ವರ್ಗದವರುಗಳಿಗೆ (ಬೋಧಕ ಮತ್ತು ಬೋಧಕೇತರ) ವಿತರಿಸಲು ಸರ್ಕಾರವು ಅನುಮತಿಸಿರುತ್ತದೆ. ಹಾಗೂ ಈ ಸಂಬಂಧ ಮುಂದಿನ ಅಗತ್ಯಕ್ರಮವನ್ನು ತಾಂತ್ರಿಕ ಶಿಕ್ಷಣ ನಿರ್ದೇಶಕರು ಕೈಗೊಳ್ಳಲು ಆದೇಶಿಸಿರುತ್ತದೆ.

ಉಲ್ಲೇಖ (3) ಮತ್ತು (4) ರ ಆದೇಶಗಳನ್ವಯ, ಇಲಾಖೆಯು ತನ್ನ ಅಧೀನಕ್ಕೆ ಒಳಪಟ್ಟಿರುವ ಎಲ್ಲಾ ಅನುದಾನಿತ ಸಂಸ್ಥೆಗಳಿಗೆ, 'ಸ್ಟೇಟ್ ಬ್ಯಾಂಕ್ ಆಫ್ ಮೈಸೂರು' ಶಾಖೆಗಳಲ್ಲಿ ಸಿಬ್ಬಂದಿ ವರ್ಗದವರ ಹಾಗೂ ಪ್ರಾಂಶುಪಾಲರ ಹೆಸರಿನಲ್ಲಿ ಪ್ರತ್ಯೇಕ ಉಳಿತಾಯ ಖಾತೆಗಳನ್ನು ತೆರೆಯುವಂತೆ ಸೂಚನೆಯನ್ನು ನೀಡಿದ್ದು, ಅದರಂತೆ, ಈ ಕೆಳಕಂಡ ಅನುದಾನಿತ ಸಂಸ್ಥೆಗಳು ಸಿಬ್ಬಂದಿ ವರ್ಗದವರ ಹಾಗೂ ಪ್ರಾಂಶುಪಾಲರ ಹೆಸರಿನಲ್ಲಿ ಪ್ರತ್ಯೇಕ ಖಾತೆಗಳನ್ನು ತೆರೆದಿರುವ ಬಗ್ಗೆ ಮಾಹಿತಿಯನ್ನು ನೀಡಿರುತ್ತವೆ ಹಾಗೂ ಮೇ 2013 ರ ಮಾಹೆಯ ವೇತನ ಬಿಲ್ಲುಗಳನ್ನು ಪಾವತಿಗಾಗಿ ಈ ಕಚೇರಿಗೆ ಸಲ್ಲಿಸಿರುತ್ತವೆ.

ಬಿಎಂಎಸ್ ಇಂಜಿನಿಯರಿಂಗ್ ಕಾಲೇಜು, ಬೆಂಗಳೂರು ಈ ಸಂಸ್ಥೆಯ ಸಿಬ್ಬಂದಿಯವರಾದ ಶ್ರೀರಾಜಪ್ಪಾಜಿ, ಫೋರ್‌ಮೆನ್, ಸಿವಿಲ್ ವಿಭಾಗ, ಶ್ರೀ ದುರ್ಗೋಜಿ, ಸಹಾಯಕ, ಸಿವಿಲ್ ವಿಭಾಗ, ಇವರುಗಳನೇಮಕಾತಿಯನ್ನು ಆಡಳಿತ ಮಂಡಳಿಯು ಮಾಡಿಕೊಂಡಿದ್ದು, ಈ ನೇಮಕಾತಿಗೆ ಇದುವರೆವಿಗೂ ನಿರ್ದೇಶನಾಲಯದಿಂದ ಅನುಮೋದನೆಯನ್ನು ಪಡೆದಿರುವುದಿಲ್ಲ ಎಂದು 2006-08 ನೇ ಸಾಲಿನ ಇಲಾಖಾ ಲೆಕ್ಕ ತಪಾಸಣಾ ವರದಿಯಲ್ಲಿ ನಮೂದಿಸಿರುವುದರಿಂದ ಹಾಗೂ ಶ್ರೀ ಸುದರ್ಶನ ಬಿ., ಸ.ಪ್ರಾಧ್ಯಾಪಕರು, ಯಾಂತ್ರಿಕ ವಿಭಾಗ, ಹಾಗೂ ಡಾ.ಶೇಷಾಚಲಮ್ ಡಿ. ಪ್ರಾಧ್ಯಾಪಕರು, ಇ & ಸಿ ವಿಭಾಗ, ಇವರುಗಳ ನೇಮಕಾತಿಯನ್ನು ಆಡಳಿತ ಮಂಡಳಿಯು ಮಾಡಿಕೊಂಡಿದ್ದು, ಈ ನೇಮಕಾತಿಗೆ ಇದುವರೆವಿಗೂ ನಿರ್ದೇಶನಾಲಯದಿಂದ ಅನುಮೋದನೆಯನ್ನು ಪಡೆದಿರುವುದಿಲ್ಲ ಎಂದು 2008-09 ಹಾಗೂ 2009-10 ನೇ ಸಾಲಿನ ಇಲಾಖಾ ಲೆಕ್ಕ ತಪಾಸಣಾ ವರದಿಯಲ್ಲಿ ನಮೂದಿಸಿರುವುದರಿಂದ ಸದರಿಯವರುಗಳ ನೇಮಕಾತಿಯನ್ನು ನಿರ್ದೇಶನಾಲಯದಿಂದ ಅನುಮೋದನೆಯನ್ನು ಪಡೆಯುವವರೆಗೆ ವೇತನವನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿದೆ.

ಈ ಹಿನ್ನೆಲೆಯಲ್ಲಿ, ಸಂಸ್ಥೆಗಳು ಸಲ್ಲಿಸಿರುವ ಮೇ 2013 ರ ವೇತನ ಬಿಲ್ಲುಗಳನ್ನು ಪರಿಶೀಲಿಸಲಾಗಿದೆ. ಕೆಳಕಂಡ ಎಲ್ಲಾ ಸಂಸ್ಥೆಯ ಕ್ಲೈಮ್‌ಗಳನ್ನು ಇಲಾಖೆಯ ಪೂರ್ಣ ಲೆಕ್ಕ ತಪಾಸಣೆಯ ನಿಬಂಧನೆಗೊಳಪಡಿಸಿ ಈ ಕೆಳಕಂಡ ಪಟ್ಟಿಯ ಕಾಲಂ(7) ರಲ್ಲಿ ಕಾಣಿಸಿರುವ ಮೊತ್ತ ರೂ.32765073/-(ರೂಪಾಯಿ ಮೂರು ಕೋಟಿ ಇಪ್ಪತ್ತೇಳು ಲಕ್ಷದ ಅರವತ್ತೈದು ಸಾವಿರದ ಎಪ್ಪತ್ತ ಮೂರು ಮಾತ್ರ)ಗಳನ್ನು ನೇರವಾಗಿ ಸಿಬ್ಬಂದಿವರ್ಗದವರಿಗೆ ವಿತರಿಸುವ ಸಲುವಾಗಿ; ಕಾಲಂ(6) ರಲ್ಲಿ ಕಾಣಿಸಿರುವ ಮೊತ್ತ ರೂ.34819883/-(ರೂಪಾಯಿ ಮೂರು ಕೋಟಿ ನಲವತ್ತೆಂಟು ಲಕ್ಷದ ಹತ್ತೊಂಬತ್ತು ಸಾವಿರದ ಎಂಟು ನೂರ ಎಂಬತ್ತ ಮೂರು ಮಾತ್ರ)ಗಳನ್ನು ವೇತನ ಬಿಲ್ಲಿನಲ್ಲಿ ಕಡಿತಗೊಳಿಸಿರುವ ಮೊತ್ತವನ್ನು ಸಂಬಂಧಪಟ್ಟ ಖಾತೆಗಳಿಗೆ ವಿತರಿಸಲು ಅನುಕೂಲವಾಗುವಂತೆ ಪ್ರಿನ್ಸಿಪಾಲರ ಖಾತೆಗೆ ಜಮೆ ಮಾಡುವುದಕ್ಕಾಗಿ; ಒಟ್ಟಾರೆ ಕಾಲಂ(5) ರಲ್ಲಿ ಕಾಣಿಸಿರುವ ಒಟ್ಟು ಮೊತ್ತ ರೂ.**67584956**/-(ರೂಪಾಯಿ ಆರು ಕೋಟಿ ಎಪ್ಪತ್ತೈದು ಲಕ್ಷದ ಎಂಬತ್ತ ನಾಲ್ಕು ಸಾವಿರದ ಒಂಬೈನೂರ ಐವತ್ತಾರುಶ ಮಾತ್ರ)ಗಳನ್ನು, ಮೇ 2013 ರ ಮಾಹೆಯ ವೇತನವನ್ನು ವಿತರಿಸುವ ಸಲುವಾಗಿ ಬಿಡುಗಡೆಗೊಳಿಸಲು ತೀರ್ಮಾನಿಸಲಾಗಿದೆ. ಆದುದರಿಂದ,ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ: ಡಿಟಿಇ 15 ಜಿಆರ್‌ಟಿ(2) 2013 ಬೆಂಗಳೂರು, ದಿ:1/6/13**

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಮೇ 2013 ರ ಮಾಹೆಯ ವೇತನ ಕಾಲಂ(7) ರಲ್ಲಿ ಕಾಣಿಸಿರುವ ಮೊತ್ತ ರೂ.32765073/-(ರೂಪಾಯಿ ಮೂರು ಕೋಟಿ ಇಪ್ಪತ್ತೇಳು ಲಕ್ಷದ ಅರವತ್ತೈದು ಸಾವಿರದ ಎಪ್ಪತ್ತ ಮೂರು ಮಾತ್ರ)ಗಳನ್ನು ಈ ಕೆಳಕಂಡ ಖಾಸಗಿ ಅನುದಾನಿತ ಸಂಸ್ಥೆಗಳ ಬೋಧಕ/ ಬೋಧಕೇತರ ಸಿಬ್ಬಂದಿ ವರ್ಗದವರುಗಳ ಉಳಿತಾಯಖಾತೆಗಳಿಗೆ ನೇರವಾಗಿ ಜಮೆ ಮಾಡುವ ಸಂಬಂಧವಾಗಿ; ವೇತನ ಕಡಿತಗಳನ್ನು ಸಂಬಂಧಿಸಿದ ವೇತನ ಕಡಿತಗಳ ಖಾತೆಗಳಿಗೆ ವಿತರಿಸುವುದಕ್ಕಾಗಿ ಸಂಬಂಧಪಟ್ಟ ಪ್ರಿನ್ಸಿಪಾಲರ ಖಾತೆಗೆ ಜಮೆ ಮಾಡಲು ಕಾಲಂ(6)ರಲ್ಲಿ ಕಾಣಿಸಿರುವ ಮೊತ್ತ ರೂ.34819883/-(ರೂಪಾಯಿ ಮೂರು ಕೋಟಿ ನಲವತ್ತೆಂಟು ಲಕ್ಷದ ಹತ್ತೊಂಬತ್ತು ಸಾವಿರದ ಎಂಟು ನೂರ ಎಂಬತ್ತ ಮೂರು ಮಾತ್ರ)ಗಳು ಸೇರಿ ಒಟ್ಟಾರೆ ಕಾಲಂ (5) ರಲ್ಲಿ ಕಾಣಿಸಿರುವ ವಾಸ್ತವಿಕ ವೇತನದ ಶೇ.85ರ ಮೊತ್ತ ರೂ.**67584956**/-(ರೂಪಾಯಿ ಆರು ಕೋಟಿ ಎಪ್ಪತ್ತೈದು ಲಕ್ಷದ ಎಂಬತ್ತ ನಾಲ್ಕು ಸಾವಿರದ ಒಂಬೈನೂರ ಐವತ್ತಾರುಶ ಮಾತ್ರ)ಗಳನ್ನು ಈ ಮೂಲಕ ಬಿಡುಗಡೆ ಮಾಡಲಾಗಿದೆ ಹಾಗೂ ಈ ಮೊತ್ತವನ್ನು ಸಿ.ಟಿ.ಎಸ್.8 ರಲ್ಲಿ 'ಡ್ರಾ' ಮಾಡಿ ವಿತರಿಸಲು ಆದೇಶಿಸಲಾಗಿದೆ.

ಅನುಬಂಧ

| ಕ್ರ.ಸಂ | ಸಂಕೇತ ಸಂಖ್ಯೆ | ಸಂಸ್ಥೆಯ ಹೆಸರು | ನೌಕರರ ಸಂಖ್ಯೆ | ಮೇ 2013 ಮಾಹೆಯ ಸರ್ಕಾರದ ಪಾಲಿನ ಮೊತ್ತ (ರೂ.) | ಪ್ರಿನ್ಸಿಪಾಲರ ಖಾತೆಗೆ ಜಮೆಯಾಗ ಬೇಕಾದ ಮೊತ್ತ (ರೂ.) | ನೌಕರರ ಖಾತೆಗೆ ಜಮೆಯಾಗ ಬೇಕಾದ ಒಟ್ಟು ಮೊತ್ತ (ರೂ.) |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | P202 | ಕೆ.ಎಚ್.ಕೆ. ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಧಾರವಾಡ | 76 | 3324436 | 503358 | 2821078 |
| 2 | P203 | ಆಚಾರ್ಯ ಪಾಠ ಶಾಲಾ ಪಾಲಿಟೆಕ್ನಿಕ್ ಸೋಮನಹಳ್ಳಿ, ಬೆಂಗಳೂರು | 62 | 2696247 | 271105 | 2425142 |
| 3 | P205 | ಬಿವಿವಿಎಸ್ ಪಾಲಿಟೆಕ್ನಿಕ್ ಬಾಗಲಕೋಟೆ | 87 | 4182654 | 1185981 | 2996673 |
| 4 | P206 | ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್, ಮೈಸೂರು | 88 | 3719278 | 1057836 | 2661442 |

| | | | | | | |
|---|---|---|---|---|---|---|
| 5 | P207 | ಎಂ.ಇ.ಐ. (ಸಂಜೆ)ಪಾಲಿಟೆಕ್ನಿಕ್ ಬೆಂಗಳೂರು | 6 | 278342 | 26177 | 252165 |
| 6 | P208 | ಜೆಎಸ್ಎಸ್ ಅಂಗವಿಕಲರ ಪಾಲಿಟೆಕ್ನಿಕ್, ಮೈಸೂರು | 59 | 2150328 | 398537 | 1751791 |
| 7 | E202 | ಬಿವಿಬಿ ಇಂಜಿನಿಯರಿಂಗ್ ಕಾಲೇಜು, ಹುಬ್ಬಳ್ಳಿ | 121 | 5651810 | 1821687 | 3830123 |
| 8 | E203 | ಪಿಇಎಸ್ ಇಂಜಿನಿಯರಿಂಗ್ ಕಾಲೇಜು, ಮಂಡ್ಯ | 190 | 8599353 | 3209370 | 5389983 |
| 9 | E204 | ಮಲೆನಾಡು ಇಂಜಿನಿಯರಿಂಗ್ ಕಾಲೇಜು, ಹಾಸನ | 149 | 6980249 | 2452751 | 4527498 |
| 10 | E207 | ಡಾ: ಅಂಬೇಡ್ಕರ್ ತಾಂತ್ರಿಕ ಮಹಾ ವಿದ್ಯಾಲಯ, ಬೆಂಗಳೂರು | 269 | 12455504 | 12020209 | 435295 |
| 11 | E208 | ಬಸವೇಶ್ವರ ಇಂಜಿನೀಯರಿಂಗ್ ಕಾಲೇಜ್, ಬಾಗಲ್‌ಕೋಟೆ | 162 | 7208571 | 1930560 | 5278011 |
| 12 | E209 | ಬಿಎಂಎಸ್ ಇಂಜಿನಿಯರಿಂಗ್ ಕಾಲೇಜು, ಬೆಂಗಳೂರು | 154 | 8358991 | 8047890 | 311101 |
| 13 | E 210 | ಬಿಎಂಎಸ್ (ಸಂಜೆ) ಇಂಜಿನಿಯರಿಂಗ್ ಕಾಲೇಜು, ಬೆಂಗಳೂರು | 30 | 1979193 | 1894422 | 84771 |
| | | **ಒಟ್ಟು ಮೊತ್ತ ರೂ.** | | **67584956** | **34819883** | **32765073** |

ಷರತ್ತು ಮತ್ತು ನಿಬಂಧನೆಗಳು:-

1)ಇಂಜಿನೀಯರಿಂಗ್ ಕಾಲೇಜುಗಳಿಗೆ ಸಂಬಂಧಪಟ್ಟಂತೆ ವೇತನಾನುದಾನವನ್ನು ಪ್ರಿನ್ಸಿಪಾಲರುಗಳು ಸಲ್ಲಿಸಿರುವ ವೇತನ ಬಿಲ್ಲಿನ ಆಧಾರದ ಹಾಗೂ ಉಲ್ಲೇಖ(2)ರ ಸರ್ಕಾರದ ಆದೇಶದನ್ವಯ ವಾಸ್ತವಿಕ ವೇತನದ ಸರ್ಕಾರದ ಪಾಲಿನ ಶೇ.85ರಷ್ಟು ವೇತನವನ್ನು ಪರಿಗಣಿಸಲಾಗಿದೆ. ಈ ಅನುದಾನ ಬಿಡುಗಡೆಯು ಇಲಾಖೆಯ ಕೂಲಂಕಷ ಲೆಕ್ಕ ತಪಾಸಣೆಗೆ ಒಳಪಟ್ಟಿರುತ್ತದೆ.

2)ಯಾವೊಬ್ಬ ನೌಕರನಿಗೆ ಹೆಚ್ಚಿನ ವೇತನ ಪಾವತಿಯಾಗಿದ್ದು ಕಂಡು ಬಂದಲ್ಲಿ, ಅಂತಹ ನೌಕರನಿಂದ ನೀಡಲಾಗಿರುವ ಹೆಚ್ಚುವರಿ ಮೊತ್ತವನ್ನು ನೇರವಾಗಿ ವಸೂಲಿ ಮಾಡಲಾಗುವುದು.

3)2012-13 ನೇ ಸಾಲಿನಲ್ಲಿ ಇಲಾಖೆಯಿಂದ ಬಿಡುಗಡೆಯಾಗಿರುವ ಅನುದಾನದ ಬಗ್ಗೆ 'ಬಳಕೆ ಪ್ರಮಾಣಪತ್ರ' ಹಾಗೂ 'ಸಿಎ' ದೃಢೀಕೃತ ಲೆಕ್ಕಪರಿಶೋಧನಾ ವರದಿಯನ್ನು ಕ.ಆ.ಸಂಹಿತೆ ಅನುಚ್ಛೇದ 161ರ ಅನ್ವಯ ಇಲಾಖೆಗೆ ಸಲ್ಲಿಸತಕ್ಕದ್ದು.

4)ಅನುದಾನಿತ ಪಾಲಿಟೆಕ್ನಿಕ್‌ಗೆ ಸಂಬಂಧಿಸಿದಂತೆ, 2012-13ನೇ ಸಾಲಿನಲ್ಲಿ ಸಂಗ್ರಹಿಸಲಾಗಿರುವ ಬೋಧನಾಶುಲ್ಕ ಹಾಗೂ ಅಭಿವೃದ್ಧಿಶುಲ್ಕದ ಶೇ.50 ರ ಮೊತ್ತವನ್ನು ಇದುವರೆವಿಗೂ ಪೂರ್ಣವಾಗಿ ಸರ್ಕಾರಕ್ಕೆ ಜಮೆ ಮಾಡದಿದ್ದಲ್ಲಿ, ಕೂಡಲೇ ಜಮೆ ಮಾಡಿ ಚಲನ್ ಪ್ರತಿಯನ್ನು ಸಿಟಿಎಸ್-8 ರ ಬಿಲ್ಲಿನ ಜೊತೆಯಲ್ಲಿ ಇಲಾಖೆಗೆ ಸಲ್ಲಿಸುವಂತೆ ತಿಳಿಸಲಾಗಿದೆ.

5)ಈಗ ಬಿಡುಗಡೆ ಮಾಡಿರುವ ಮುಂಗಡ ನಿರ್ವಹಣಾ ಅನುದಾನ ಮೊತ್ತದ ಖರ್ಚನ್ನು 2013-14 ನೇ ಸಾಲಿನ ಕೆಳಕಂಡ ಲೆಕ್ಕ ಶೀರ್ಷಿಕೆಯಲ್ಲಿ ಭರಿಸತಕ್ಕದ್ದು. 2203-ತಾಂತ್ರಿಕ ಶಿಕ್ಷಣ-00-104-ಸರ್ಕಾರೇತರ ತಾಂತ್ರಿಕ ಕಾಲೇಜುಗಳು, ಹಾಗೂ ಸಂಸ್ಥೆಗಳಿಗೆ ಸಹಾಯಾನುದಾನ-0-01-ಸರ್ಕಾರೇತರ ತಾಂತ್ರಿಕ ಶಾಲೆಗಳು-101-ಸಹಾಯಾನುದಾನ(ಯೋಜನೇತರ)(2203-00-104-0-01-101).

ನಿರ್ದೇಶಕರು.

ಇವರಿಗೆ: ಮೇಲ್ಕಂಡ ಸಂಬಂಧಿಸಿದ ಎಲ್ಲಾ ಖಾಸಗಿ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳು ಹಾಗೂ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ ಸೂಕ್ತ ಕ್ರಮಕ್ಕಾಗಿ.

ಪ್ರತಿ: 1] ಮಹಾಲೇಖಪಾಲರು(ಎ&ಇ), ಕರ್ನಾಟಕ, ಬೆಂಗಳೂರು.
2] ಸ್ಪೆಷಲ್ ಸೆಲ್, ಮಹಾಲೇಖಪಾಲರವರ ಕಛೇರಿ, ಬೆಂಗಳೂರು.
3] ಖಜಾನಾಧಿಕಾರಿಗಳು, ರಾಜ್ಯ ಹುಜೂರು ಖಜಾನೆ, ಬೆಂಗಳೂರು. ಇವರ ಮಾಹಿತಿಗಾಗಿ ಮತ್ತು ಈಗ ಬಿಡುಗಡೆ ಮಾಡಲಾಗಿರುವ ಮೊತ್ತ ರೂ.**67584956/-**(ರೂಪಾಯಿ ಆರು ಕೋಟಿ ಎಪ್ಪತ್ತೈದು ಲಕ್ಷದ ಎಂಬತ್ತ ನಾಲ್ಕು ಸಾವಿರದ ಒಂಬೈನೂರ ಐವತ್ತಾರುಶ ಮಾತ್ರ)ಗಳನ್ನು ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಹೆಸರಿಗೆ ಇದೇ ಉದ್ದೇಶಕ್ಕಾಗಿ ತೆರೆಯಲಾಗಿರುವ 'ಸ್ಟೇಟ್ ಬ್ಯಾಂಕ್ ಆಫ್ ಮೈಸೂರು' ಇಲ್ಲಿನ 'ಜಿ' ಸೇವಾ ಶಾಖೆ,(ಐಎಫ್‌ಎಫ್‌ಸಿ ಕೋಡ್ ಸಂ. ಎಸ್‌ಬಿಎಂವೈ0040681) ಶಿವಾಜಿನಗರ, ಬೆಂಗಳೂರು, ಇಲ್ಲಿನ ಚಾಲ್ತಿ ಖಾತೆ ಸಂ '64056330834' ಗೆ ಆರ್.ಟಿ.ಜಿ.ಎಸ್. ವ್ಯವಸ್ಥೆಯ ಮೂಲಕ ಜಮೆ ಮಾಡಲು ಅನುಕೂಲವಾಗುವಂತೆ ಧನಾದೇಶವನ್ನು ನೀಡಬೇಕಾಗಿ ಈ ಮೂಲಕ ಕೋರಲಾಗಿದೆ.
4] ಲೆಕ್ಕಾಧಿಕಾರಿಗಳು [ಬಿಲ್ಸ್].
5] ನಿರ್ದೇಶನಾಲಯದ ಬಿಎಲ್‌ಎಸ್[3], ಐಎನ್‌ಎಸ್ (1), (2), (4) ಮತ್ತು ಆರ್‌ಇಸಿ(2) ಉಪಶಾಖೆಗಳಿಗೆ.
6] ನಗದು ಶಾಖೆಗೆ ಮುಂದಿನ ಕ್ರಮಕ್ಕಾಗಿ.

ತಾಂತ್ರಿಕ ಶಿಕ್ಷಣ ಇಲಾಖೆ ನಿರ್ದೇಶಕರು, ಬೆಂಗಳೂರು ಇವರ ಕಚೇರಿ ನಡವಳಿಗಳು

ವಿಷಯ: ಖಾಸಗಿ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳ ಸಿಬ್ಬಂದಿ ವರ್ಗದವರಿಗೆ 2013-14 ನೇ ಸಾಲಿನಲ್ಲಿ ಮೇ 2013 ರ ಮಾಹೆಗೆ ವೇತನವನ್ನು ಬಿಡುಗಡೆಗೊಳಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರಿ ಆದೇಶ ಸಂಖ್ಯೆ: ಇಡಿ 55 ಟಿಜಿಎಲ್ 1964 ದಿ:29-10-1966
2) ಸರ್ಕಾರಿ ಆದೇಶ ಸಂಖ್ಯೆ: ಇಡಿ 184 ಟಿಪಿಇ 2009 ದಿ: 27-7-2010
3) ಸರ್ಕಾರಿ ಆದೇಶ ಸಂಖ್ಯೆ: ಇಡಿ 184 ಟಿಪಿಇ 2009 ದಿ: 2-3-2010
4) ಸರ್ಕಾರಿ ಪತ್ರ ಸಂಖ್ಯೆ: ಇಡಿ 142 ಟಿಪಿಇ 2010 ದಿ: 24-5-2010
5) ಸರ್ಕಾರಿ ಪತ್ರ ಸಂಖ್ಯೆ: ಇಡಿ 368 ಟಿಪಿಇ 2010 ದಿ: 16-5-2012

-ooo-

ಪ್ರಸ್ತಾವನೆ:

ಉಲ್ಲೇಖ (2) ರ ಸರ್ಕಾರಿ ಆದೇಶದಲ್ಲಿ, ಸರ್ಕಾರವು ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನಕ್ಕೊಳಪಟ್ಟಿರುವ ಎಲ್ಲಾ ಖಾಸಗಿ ಅನುದಾನಿತ ಇಂಜಿನಿಯರಿಂಗ್ ಕಾಲೇಜು ಹಾಗೂ ಪಾಲಿಟೆಕ್ನಿಕ್‌ಗಳ ಸಿಬ್ಬಂದಿ ವರ್ಗದವರುಗಳಿಗೆ ಸರ್ಕಾರದ ಪಾಲಿನ ವಾಸ್ತವಿಕ ವೇತನದ ಶೇ.85ರಷ್ಟು ಮೊತ್ತವನ್ನು ರಾಷ್ಟ್ರೀಕೃತ ಬ್ಯಾಂಕ್ ಮೂಲಕ ನೇರವಾಗಿ ಪ್ರತೀ ತಿಂಗಳು ಜಮೆ ಮಾಡುವ ಬಗ್ಗೆ ಸೂಕ್ತ ಕ್ರಮ ಜರುಗಿಸುವಂತೆ ತಾಂತ್ರಿಕ ಶಿಕ್ಷಣ ನಿರ್ದೇಶಕರಿಗೆ ಆದೇಶವನ್ನು ನೀಡಿರುತ್ತದೆ.

ಉಲ್ಲೇಖ (3)ರ ಆದೇಶದಲ್ಲಿ, 'ಸ್ಟೇಟ್ ಬ್ಯಾಂಕ್ ಆಫ್ ಮೈಸೂರೂ' ನ್ನು "ನೋಡಲ್ ಬ್ಯಾಂಕ್" ಎಂದು ಗುರುತಿಸಿ ಅನುದಾನಿತ ಸಂಸ್ಥೆಗಳ ಎಲ್ಲಾ ಸಿಬ್ಬಂದಿ ವರ್ಗದವರು ಕಡ್ಡಾಯವಾಗಿ ತಮ್ಮ ತಮ್ಮ ಸಂಸ್ಥೆಗಳಿಗೆ ಹತ್ತಿರವಿರುವ 'ಸ್ಟೇಟ್ ಬ್ಯಾಂಕ್ ಆಫ್ ಮೈಸೂರು' ನ ಶಾಖೆಗಳಲ್ಲಿ ಉಳಿತಾಯ ಖಾತೆಗಳನ್ನು ತೆರೆಯಬೇಕೆಂಬ ನಿಬಂಧನೆಯನ್ನು ವಿಧಿಸಿ, ಆ ದಿನಾಂಕದವರೆವಿಗೂ 'ಸ್ಟೇಟ್ ಬ್ಯಾಂಕ್ ಆಫ್ ಮೈಸೂರು' ನ ಶಾಖೆಗಳಲ್ಲಿ ಉಳಿತಾಯ ಖಾತೆಗಳನ್ನು ಹೊಂದಿರುವ ಹಾಗೂ 2009-10ನೇ ಸಾಲಿನಲ್ಲಿ ಸಂಗ್ರಹಿಸಲಾಗಿರುವ ಬೋಧನಾ ಶುಲ್ಕದಲ್ಲಿ ಸರ್ಕಾರದ ಪಾಲಿನ ಶೇ.50ರಷ್ಟು ಮೊತ್ತವನ್ನು ಸರ್ಕಾರಕ್ಕೆ ಜಮೆ ಮಾಡಿರುವ ಒಟ್ಟು 39 ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಗಳ ಸಿಬ್ಬಂದಿ ವರ್ಗದವರಿಗೆ ವೇತನವನ್ನು ಪಾವತಿಸಲು ಆದೇಶಿಸಿರುತ್ತದೆ.

ಈ ಕೆಳಕಂಡ ಅನುದಾನಿತ ಸಂಸ್ಥೆಗಳು, ತಮ್ಮ ಸಂಸ್ಥೆಗಳ ಆವರಣದಲ್ಲಿಯೇ ಹಲವಾರು ವರ್ಷಗಳಿಂದ ರಾಷ್ಟ್ರೀಕೃತ ಬ್ಯಾಂಕ್‌ಗಳ ಶಾಖೆಗಳನ್ನು ಹೊಂದಿದ್ದು, ತಮ್ಮ ಸಂಸ್ಥೆಯ ಸಿಬ್ಬಂದಿ ವರ್ಗದವರುಗಳಿಗೆ ಸದರಿ ಬ್ಯಾಂಕ್‌ಗಳ ಮೂಲಕವೇ ವೇತನವನ್ನು ವಿತರಿಸಬೇಕೆಂದು ಸರ್ಕಾರವನ್ನು ಕೋರಿರುವ ಮೇರೆಗೆ ದಿನಾಂಕ: 22-5-2010 ರಂದು ಮಾನ್ಯ ಉನ್ನತ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಇಲಾಖಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಇಲಾಖೆಗೆ ನಿರ್ದೇಶನವನ್ನು ನೀಡಲಾಗಿದೆ. ಈ ಬಗ್ಗೆ ಸೂಕ್ತ ಆದೇಶವನ್ನು ನೀಡುವಂತೆ ಈಗಾಗಲೇ ಸರ್ಕಾರವನ್ನು ಕೋರಲಾಗಿದೆ.

ಈ ಸಂಬಂಧ ಸರ್ಕಾರವು ಉಲ್ಲೇಖ(5)ರ ಪತ್ರದಲ್ಲಿ 'ಸ್ಟೇಟ್ ಬ್ಯಾಂಕ್ ಆಫ್ ಮೈಸೂರು' ಅನ್ನು "ನೋಡಲ್ ಬ್ಯಾಂಕ್" ಎಂದು ಗುರುತಿಸಿ ನಿರ್ದೇಶನ ನೀಡಿರುವ ಹಿನ್ನೆಲೆಯಲ್ಲಿ ಸದರಿ ಬ್ಯಾಂಕ್ ಮೂಲಕ

'ಇಸಿಎಸ್' ಪದ್ಧತಿಯಲ್ಲಿ ವೇತನ ಬಿಡುಗಡೆ ಮಾಡಬೇಕಾಗಿರುತ್ತದೆ. ಆದರೆ ಸದರಿ ಸಂಸ್ಥೆಗಳ ಸಿಬ್ಬಂದಿ ವರ್ಗದವರು ಬ್ಯಾಂಕ್ ಖಾತೆ ತೆರೆಯಲು ಕಾಲವಕಾಶ ನೀಡಬೇಕಾಗಿರುವುದರಿಂದ ಹಳೇ ಪದ್ಧತಿಯಲ್ಲಿ ವೇತನವನ್ನು ಬಿಡುಗಡೆ ಮಾಡಬೇಕಾಗಿರುತ್ತದೆ.

ಈಗ, ಈ ಕೆಳಕಂಡ ಅನುದಾನಿತ ಸಂಸ್ಥೆಗಳಿಗೆ ಅವುಗಳು ಇಲಾಖೆಗೆ ಸಲ್ಲಿಸಿರುವ ವೇತನ ಕ್ಲೇಮಿನ ಆಧಾರದ ಮೇಲೆ ಸರ್ಕಾರದ ಪಾಲಿನ ಶೇ.85 ರಷ್ಟು ಮೊತ್ತವನ್ನು ಕೆಳಕಂಡ ಪಟ್ಟಿಯ ಕಾಲಂ(4) ರಲ್ಲಿ ಕಾಣಿಸಿರುವಂತೆ ಮೇ 2013 ರ ಮಾಹೆಯ ವೇತನವನ್ನು ವಿತರಿಸಬೇಕಾಗಿರುತ್ತದೆ.

ಅನುಬಂಧ

| ಕ್ರಸಂ | ಸಂಸ್ಥೆಯ ಹೆಸರು | ಮೇ 2013 ರ ಮಾಹೆಗೆ ಪ್ರಿನ್ಸಿಪಾಲರು ಕ್ಲೇಮು ಮಾಡಿರುವ ಶೇ.100 ರಷ್ಟು ಮೊತ್ತ(ರೂ.ಗಳಲ್ಲಿ) | ಸಂಸ್ಥೆಗೆ ಬಿಡುಗಡೆಯಾಗ ಬೇಕಾದ ಒಟ್ಟು ವೇತನಾನುದಾನದ ಶೇ.85 ರಷ್ಟು ಮೊತ್ತ (ರೂ.ಗಳಲ್ಲಿ) |
|---|---|---|---|
| 1 | 2 | 3 | 4 |
| 1 | ಶ್ರೀ ಜಯಚಾಮರಾಜೇಂದ್ರ ಕಾಲೇಜು ಆಫ್ ಇಂಜಿನಿಯರಿಂಗ್, ಮೈಸೂರು. | 12183388 | 10355880 |
| 2 | ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್, ಮೈಸೂರು. | 8500710 | 7225604 |
| 3 | ಪಿಡಿಎ ಇಂಜಿನಿಯರಿಂಗ್ ಕಾಲೇಜು, ಗುಲ್ಬರ್ಗಾ | 9673830 | 8222768 |
| **ಒಟ್ಟು ರೂ.** | | **30357928** | **25804252** |

ಮೇಲೆ ವಿವರಿಸಿರುವಂತೆ ಮೇಲ್ಕಂಡ ಅನುದಾನಿತ ಸಂಸ್ಥೆಗಳಿಗೆ ಕಾಲಂ(4) ರಲ್ಲಿ ಕಾಣಿಸಿರುವ ಒಟ್ಟು ಮೊತ್ತ ರೂ.25804252/-(ರೂಪಾಯಿ ಎರಡು ಕೋಟಿ ಐವತ್ತೆಂಟು ಲಕ್ಷದ ನಾಲ್ಕು ಸಾವಿರದ ಎರಡು ನೂರ ಐವತ್ತೆರಡು ಮಾತ್ರ)ಗಳನ್ನು ಬಿಡುಗಡೆಗೊಳಿಸಲು ನಿರ್ಧರಿಸಲಾಗಿದೆ. ಆದುದರಿಂದ, ಈ ಕೆಳಕಂಡ ಆದೇಶ.

**ಕಚೇರಿ ಆದೇಶ ಸಂಖ್ಯೆ: ಡಿಟಿಇ 16 ಜಿಆರ್‌ಟಿ(2) 2013 ಬೆಂಗಳೂರು, ದಿನಾಂಕ: 5/6/13**

**ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಮೇಲ್ಕಂಡ ಪಟ್ಟಿಯ ಕಾಲಂ (2)ರಲ್ಲಿ ಕಾಣಿಸಿರುವ ಅನುದಾನಿತ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ, ಕಾಲಂ(4)ರಲ್ಲಿ ಕಾಣಿಸಿರುವ ರೂ.25804252/-(ರೂಪಾಯಿ ಎರಡು ಕೋಟಿ ಐವತ್ತೆಂಟು ಲಕ್ಷದ ನಾಲ್ಕು ಸಾವಿರದ ಎರಡು ನೂರ ಐವತ್ತೆರಡು ಮಾತ್ರ)ಗಳನ್ನು ಸರ್ಕಾರದ ಪಾಲಿನ ಶೇ. 85ರಷ್ಟು ಮೊತ್ತದ ಅನುದಾನವಾಗಿ ಮೇ 2013 ರ ಮಾಹೆಗೆ ಸಂಬಂಧಿಸಿದಂತೆ ವೇತನವನ್ನು ವಿತರಿಸುವ ಸಂಬಂಧವಾಗಿ ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗೊಳಪಡಿಸಿ ಬಿಡುಗಡೆ ಮಾಡಲಾಗಿದೆ ಹಾಗೂ ಈ ಮೊತ್ತವನ್ನು ಸಿ.ಟಿ.ಎಸ್.8ರಲ್ಲಿ ಡ್ರಾ ಮಾಡಿ ವಿತರಿಸಲು ಆದೇಶಿಸಲಾಗಿದೆ.**

ಷರತ್ತು ಮತ್ತು ನಿಬಂಧನೆಗಳು:

1) ಈಗ ಬಿಡುಗಡೆ ಮಾಡಿರುವ ಅನುದಾನವನ್ನು ಆಯಾ ಸಂಸ್ಥೆಗಳು ಸಲ್ಲಿಸಿರುವ ವೇತನ ಬಿಲ್ಲುಗಳನುಸಾರ, ಉಲ್ಲೇಖ(2)ರ ಸರ್ಕಾರದ ಆದೇಶದನ್ವಯ ವಾಸ್ತವಿಕ ವೇತನದ ಸರ್ಕಾರದ ಪಾಲಿನ ಶೇ.85ರಷ್ಟು ವೇತನವನ್ನು ಪರಿಗಣಿಸಲಾಗಿದೆ. ಆದುದರಿಂದ, ಈ ಪಾವತಿಯು ಇಲಾಖೆಯ ಕೂಲಂಕಷ ಲೆಕ್ಕತಪಾಸಣೆಗೆ ಒಳಪಟ್ಟಿರುತ್ತದೆ.
2) ಲೆಕ್ಕ ತಪಾಸಣೆಯಲ್ಲಿ ಹೆಚ್ಚುವರಿ ಅನುದಾನವು ಪಾವತಿಯಾಗಿರುವುದು ಕಂಡುಬಂದಲ್ಲಿ, ಆಯಾ ಸಂಸ್ಥೆಗಳಿಂದ ಇಲಾಖೆಯು ನಿರ್ಧರಿಸುವ ರೀತಿಯಲ್ಲಿ ವಸೂಲಿಸಲಾಗುವುದು.
3) 2012-13 ನೇ ಸಾಲಿನಲ್ಲಿ ಇಲಾಖೆಯಿಂದ ಬಿಡುಗಡೆಯಾಗಿರುವ ಅನುದಾನದ ಬಗ್ಗೆ 'ಬಳಕೆ ಪ್ರಮಾಣಪತ್ರ' ಹಾಗೂ 'ಸಿಎ' ದೃಢೀಕೃತ ಲೆಕ್ಕಪರಿಶೋಧನಾ ವರದಿಯನ್ನು ಕ.ಆ.ಸಂಹಿತೆ ಅನುಚ್ಛೇದ 161ರ ಅನ್ವಯ ಇಲಾಖೆಗೆ ಸಲ್ಲಿಸತಕ್ಕದ್ದು.
4) ಇದಕ್ಕೆ ತಗಲುವ ವೆಚ್ಚವನ್ನು ಲೆಕ್ಕಶೀರ್ಷಿಕೆ 2203-ತಾಂತ್ರಿಕ ಶಿಕ್ಷಣ-00-104-ಸರ್ಕಾರೇತರ ತಾಂತ್ರಿಕ ಕಾಲೇಜು ಮತ್ತು ಸಂಸ್ಥೆಗಳಿಗೆ ಸಹಾಯ-0-01 ಸರ್ಕಾರೇತರ ತಾಂತ್ರಿಕ ಶಾಲೆಗಳು-101 ಸಹಾಯಾನುದಾನ (ಯೋಜನೇತರ) [2203-00-104-0-01-101) ಅಡಿ 2013-14 ರ ಸಾಲಿನ ಆಯವ್ಯಯದಲ್ಲಿ ಭರಿಸತಕ್ಕದ್ದು.
5) ಪ್ರಪತ್ರ ಕ.ಆ.ಸಂ.-3 ಅನುಚ್ಛೇದ-24ರಲ್ಲಿ ನಿಗದಿಪಡಿಸಿರುವ ನಮೂನೆಯಲ್ಲಿ ಅನುದಾನದ ಬಿಲ್ಲನ್ನು ತಯಾರಿಸಿ ಸಲ್ಲಿಸತಕ್ಕದ್ದು.

ನಿರ್ದೇಶಕರು

ಇವರಿಗೆ,

ಮೇಲ್ಕಂಡ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಚಾರ್ಯರಿಗೆ ಸೂಕ್ತ ಕ್ರಮಕ್ಕಾಗಿ.

ಪ್ರತಿ:

1) ಮಹಾಲೇಖಪಾಲರು(ಎ&ಇ), ಕರ್ನಾಟಕ, ಬೆಂಗಳೂರು.
2) ಸ್ಪೆಷಲ್ ಸೆಲ್, ಮಹಾಲೇಖಪಾಲರ ಕಚೇರಿ, ಕರ್ನಾಟಕ, ಬೆಂಗಳೂರು.
3) ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು ಇವರ ಮಾಹಿತಿಗಾಗಿ ಮತ್ತು ಬಿಡುಗಡೆ ಮಾಡಿರುವ ಒಟ್ಟು ಮೊತ್ತ ರೂ.25804252/-(ರೂಪಾಯಿ ಎರಡು ಕೋಟಿ ಐವತ್ತೆಂಟು ಲಕ್ಷದ ನಾಲ್ಕು ಸಾವಿರದ ಎರಡು ನೂರ ಐವತ್ತೆರಡು ಮಾತ್ರ)ಗಳಿಗೆ ಸಂಬಂಧಪಟ್ಟ ಪ್ರಾಚಾರ್ಯರುಗಳ ಹೆಸರಿಗೆ, ಧನಾದೇಶವನ್ನು ನೀಡಬೇಕಾಗಿ ಈ ಮೂಲಕ ಕೋರಲಾಗಿದೆ.
4) ಲೆಕ್ಕಾಧಿಕಾರಿಯವರು(ಬಿಲ್ಸ್), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
5) ಆಡಳಿತಾಧಿಕಾರಿಯವರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
6) ನಿರ್ದೇಶನಾಲಯದ ಬಿಎಲ್ಎಸ್(3), ಐಎನ್ಎಸ್ (1), (2), (4), ಆರ್ಇಸಿ(2) ಮತ್ತು ನಗದು ಶಾಖೆಗೆ, ಮುಂದಿನ ಕ್ರಮಕ್ಕಾಗಿ.

ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಕಚೇರಿ ನಡವಳಿಗಳು

ವಿಷಯ: ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನಕ್ಕೊಳಪಡಿಸಲ್ಪಟ್ಟಿರುವ ರಾಜ್ಯದ ಖಾಸಗಿ ಅನುದಾನಿತ ಚಿತ್ರಕಲಾಶಾಲೆ/ಮಹಾವಿದ್ಯಾಲಯಗಳಿಗೆ 2013-14ನೇ ಸಾಲಿನಲ್ಲಿ ಮೇ 2013ರ ಮಾಹೆಯ ವೇತನಾನುದಾನವನ್ನು ಯೋಜನೇತರ ಲೆಕ್ಕ ಶೀರ್ಷಿಕೆಯಡಿಯಲ್ಲಿ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ: (1) ಸರ್ಕಾರಿ ಆದೇಶ ಸಂಖ್ಯೆ: ಇಡಿ 9 ಎಂಪಿಎಸ್ 90 ದಿ:27-3-1991
(2) ಸರ್ಕಾರಿ ಆದೇಶ ಸಂಖ್ಯೆ: ಇಡಿ 36 ಎಂಪಿಎಸ್ 2009, ದಿ: 22.06.2009
(3) ಸರ್ಕಾರಿ ಆದೇಶ ಸಂಖ್ಯೆ: ಇಡಿ 68 ಟಿಪಿಇ 2010, ದಿ: 14.05.2010
(4) ಉಪನಿರ್ದೇಶಕರು(ತನಿಖೆ),ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರ ತನಿಖಾ ವರದಿ ದಿ: 13-09-2010

ಪ್ರಸ್ತಾವನೆ:

ಉಲ್ಲೇಖ (1) ಮತ್ತು (2) ರ ಸರ್ಕಾರಿ ಆದೇಶಗಳಲ್ಲಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಟ್ಟಿದ್ದ ರಾಜ್ಯದ ಎಲ್ಲಾ ಕಲಾಶಾಲೆ/ ಮಹಾವಿದ್ಯಾಲಯಗಳ ಆಯವ್ಯಯ ನಿರ್ವಹಣೆ ಹಾಗೂ ಸಿಬ್ಬಂದಿ ವರ್ಗದವರ ಸೇವಾ ನಿರ್ವಹಣೆಯನ್ನು ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡಿಸಲಾಗಿದೆ. ಉಲ್ಲೇಖ (1)ರ ಆದೇಶದ ಸೂಚನೆಯಂತೆ ತಾಂತ್ರಿಕ ಶಿಕ್ಷಣ ಇಲಾಖೆಯ 2010-2011 ನೇ ಸಾಲಿನಿಂದ ಯೋಜನೇತರ ಲೆಕ್ಕ ಶೀರ್ಷಿಕೆ [2203-ತಾಂತ್ರಿಕ ಶಿಕ್ಷಣ, 104-ಸರ್ಕಾರೇತರ ತಾಂತ್ರಿಕ ಕಾಲೇಜು ಮತ್ತು ಸಂಸ್ಥೆಗಳಿಗೆ ಸಹಾಯ,09-ಲಲಿತಕಲಾ ಮಹಾವಿದ್ಯಾಲಯಗಳು,101- ಸಹಾಯಾನುದಾನ (2203-00-104-09-101) ಅಡಿಯಲ್ಲಿ ಅನುದಾನಿತ ಕಲಾಶಾಲೆ/ ಮಹಾವಿದ್ಯಾಲಯಗಳ ವೇತನಕ್ಕೆ ಸಂಬಂಧಿಸಿದಂತೆ ಆಯವ್ಯಯವನ್ನು ಒದಗಿಸಿಕೊಳ್ಳಲಾಗಿದೆ.

ಆದುದರಿಂದ, ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ಕಾಣಿಸಿರುವ 22 ಚಿತ್ರಕಲಾ ಶಾಲೆ/ ಮಹಾವಿದ್ಯಾಲಯಗಳ ವೇತನವನ್ನು ಆಯಾ ಸಂಸ್ಥೆಗಳ ಪ್ರಾಂಶುಪಾಲರುಗಳು ಮೇ 2013ರ ಮಾಹೆಗೆ ಸಲ್ಲಿಸಿರುವ ವೇತನ ಕ್ಲೇಮ್ಸುಗಳನ್ನು ಸ್ಥೂಲವಾಗಿ ಪರಿಶೀಲಿಸಿ, ಇಲಾಖೆಯ ಕೂಲಂಕಷ ಲೆಕ್ಕ ತಪಾಸಣೆಯ ನಿಬಂಧನೆಯ ಮೇರೆಗೆ ಅನುಬಂಧದ ಒಟ್ಟು ಮೊತ್ತ **ರೂ.5486013/-(ರೂಪಾಯಿ ಐವತ್ತ ನಾಲ್ಕು ಲಕ್ಷದ ಎಂಬತ್ತಾರು ಸಾವಿರದ ಹದಿಮೂರು ಮಾತ್ರ)**ಗಳ ವೇತನ ಅನುದಾನವನ್ನು ಬಿಡುಗಡೆಗೊಳಿಸಲು ನಿರ್ಧರಿಸಲಾಗಿದೆ. ಆದುದರಿಂದ ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ: ಡಿಟಿಇ 17 ಜಿಆರ್‌ಟಿ(2) 2013 ಬೆಂಗಳೂರು, ದಿನಾಂಕ: 1/6/13**

ಈ ಕೆಳಕಂಡ 22 ಖಾಸಗಿ ಅನುದಾನಿತ ಚಿತ್ರಕಲಾಶಾಲೆ / ಮಹಾವಿದ್ಯಾಲಯಗಳ ಬೋಧಕ/ ಬೋಧಕೇತರ ಸಿಬ್ಬಂದಿಯವರಿಗೆ 2013-14 ನೇ ಸಾಲಿನ ಮೇ 2013ರ ಮಾಹೆಗೆ ವೇತನವನ್ನು ವಿತರಿಸಲು ಅನುಕೂಲವಾಗುವಂತೆ ಕೆಳಕಂಡ ಷರತ್ತು ಮತ್ತು ನಿಬಂಧನೆಗೊಳಪಡಿಸಿ, ಸಂಬಂಧಪಟ್ಟ ಸಂಸ್ಥೆಗಳ ಪ್ರಿನ್ಸಿಪಾಲರುಗಳಿಗೆ ಅನುಬಂಧದ ಕಾಲಂ(5)ರಲ್ಲಿ ಕಾಣಿಸಿರುವಂತೆ ಪ್ರತೀ ಸಂಸ್ಥೆಗೆ ಪ್ರತ್ಯೇಕವಾಗಿ

ಅನ್ವಯಿಸುವಂತೆ ಒಟ್ಟಾರೆ ಮುಂಗಡ ವೇತನಾನುದಾನ **ರೂ.5486013/-(ರೂಪಾಯಿ ಐವತ್ತ ನಾಲ್ಕು ಲಕ್ಷದ ಎಂಬತ್ತಾರು ಸಾವಿರದ ಹದಿಮೂರು ಮಾತ್ರ)**ಗಳನ್ನು ಈ ಮೂಲಕ ಬಿಡುಗಡೆ ಮಾಡಲಾಗಿದೆ ಹಾಗೂ ಈ ಮೊತ್ತವನ್ನು ಸಿ.ಟಿ.ಎಸ್.8ರಲ್ಲಿ ಡ್ರಾ ಮಾಡಿ ವಿತರಿಸಲು ಆದೇಶಿಸಲಾಗಿದೆ.

**ಅನುಬಂಧ**

| ಕ್ರ ಸಂ | ಸಂಸ್ಥೆಯ ಹೆಸರು | ಸಿಬ್ಬಂದಿ ಸಂಖ್ಯೆ | ಮೇ 2013ರ ಮಾಹೆಗೆ ಪ್ರಿನ್ಸಿಪಾಲರು ಕ್ಲೇಮು ಮಾಡಿರುವ ಅನುದಾನದ ಮೊತ್ತ.(ರೂ.ಗಳಲ್ಲಿ) | ಮೇ 2013ರ ಮಾಹೆಗೆ ಬಿಡುಗಡೆ ಮಾಡಲಾಗಿರುವ ಒಟ್ಟು ಮೊತ್ತ (ರೂ.ಗಳಲ್ಲಿ) |
|---|---|---|---|---|
| 1 | 2 | 3 | 4 | 5 |
| 1 | ಕೆನ್ ಕಲಾ ಶಾಲೆ, ಬೆಂಗಳೂರು | 5 | 185401 | 185401 |
| 2 | ಕಲಾ ಮಂದಿರ ಚಿತ್ರಕಲಾ ಮಹಾವಿದ್ಯಾಲಯ, ಬೆಂಗಳೂರು | 3 | 130642 | 130642 |
| 3 | ಮಹಾಲಸ ಚಿತ್ರಕಲಾ ಮಹಾವಿದ್ಯಾಲಯ, ಮಂಗಳೂರು | 6 | 189851 | 189851 |
| 4 | ನಿರ್ಮಲಾ ಚಿತ್ರಕಲಾ ಶಾಲೆ, ಹಾಸನ | 4 | 131511 | 131511 |
| 5 | ಆದರ್ಶ ಚಿತ್ರಕಲಾ ಮಹಾವಿದ್ಯಾಲಯ, ಇಂಡಿ, ಬಿಜಾಪುರ | 3 | 166216 | 166216 * |
| 6 | ಶ್ರೀ ಸಿದ್ದೇಶ್ವರ ಕಲಾ ಮಂದಿರ, ಬಿಜಾಪುರ. | 3 | 96952 | 96952 |
| 7 | ಶ್ರೀ ವಿವೇಕಾನಂದ ಕಲಾಮಂದಿರ, ರಾಯಬಾಗ | 7 | 223219 | 223219 |
| 8 | ಶ್ರೀ ಮುರುಘೇಂದ್ರ ಲಲಿತ ಕಲಾ ಮಂದಿರ, ಅಥಣಿ | 4 | 129746 | 129746 |
| 9 | ಕರ್ನಾಟಕ ಲಲಿತ ಮಹಾವಿದ್ಯಾಲಯ, ಗೋಕಾಕ | 7 | 428368 | 391142 * |
| 10 | ಮಹೇಶ ಚಿತ್ರಕಲಾ ಮಹಾವಿದ್ಯಾಲಯ, ಜಮಖಂಡಿ. | 7 | 213332 | 213332 |
| 11 | ಜೆ.ಎನ್.ಚಿತ್ರಕಲಾ ಮಹಾವಿದ್ಯಾಲಯ, ಗದಗ | 11 | 363042 | 363042 |
| 12 | ಭಾರತೀಯ ಕಲಾಕೇಂದ್ರ, ಧಾರವಾಡ | 8 | 292438 | 292438 |
| 13 | ಜೆ.ಎಸ್.ಎಸ್.ಹಾಲಭಾವಿ ಸ್ಕೂಲ್ ಆಫ್ ಆರ್ಟ್, ಧಾರವಾಡ | 8 | 284050 | 284050 |
| 14 | ಶ್ರೀ ವಿಜಯ ಮಹಾಂತೇಶ ಲಲಿತಕಲಾ ಮಹಾವಿದ್ಯಾಲಯ, ಹುಬ್ಬಳ್ಳಿ | 13 | 438625 | 438625 |
| 15 | ಯೋಗೀಶ ಚಿತ್ರಕಲಾ ಮಹಾವಿದ್ಯಾಲಯ, ಬೀದರ್ | 5 | 167724 | 167724 |

| | | | | |
|---|---|---|---|---|
| 16 | ಚಿತ್ರಕಲಾ ಮಹಾವಿದ್ಯಾಲಯ, ಹೂವಿನಹಿಪ್ಪರಗಿ | 6 | 158791 | 158791 |
| 17 | ವಿಜಯ ಕಲಾಮಂದಿರ, ಗದಗ | 8 | 335756 | 335756 |
| 18 | ರವೀಂದ್ರ ಕಲಾ ನಿಕೇತನ, ತುಮಕೂರು | 7 | 532794 | 532794 * |
| 19 | ಬೆನಾನ್‌ಸ್ಮಿತ್ ಕಾಲೇಜ್ ಆಫ್ ಫೈನ್ ಆರ್ಟ್, ಬೆಳಗಾವಿ | 4 | 169633 | 169633 |
| 20 | ದಿ ಐಡಿಯಲ್ ಚಿತ್ರಕಲಾ ಮಹಾವಿದ್ಯಾಲಯ, ಗುಲಬರ್ಗ | 7 | 440896 | 440896 * |
| 21 | ವಾಣಿ ಚಿತ್ರಕಲಾ ಶಾಲೆ, ಚಿಕ್ಕನಾಯಕನಹಳ್ಳಿ | 1 | 76272 | 76272* |
| 22 | ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್, ಮೈಸೂರು | 6 | 367980 | 367980 * |
| | **ಒಟ್ಟು** | | **5523239** | **5486013** |

**ಒಟ್ಟು ರೂ.5486013/-(ರೂಪಾಯಿ ಐವತ್ತ ನಾಲ್ಕು ಲಕ್ಷದ ಎಂಬತ್ತಾರು ಸಾವಿರದ ಹದಿಮೂರು ಮಾತ್ರ)**

**ಮೇಲ್ಕಂಡ ಕ್ರ.ಸಂ. 5 ರಲ್ಲಿನ ಸಂಸ್ಥೆ ಬಿಡುಗಡೆ ಮಾಡಿರುವ ಮೊತ್ತದಲ್ಲಿ ಫೆಬ್ರವರಿ 2013 ಹಾಗೂ ಮೇ 2013 ರ ವೇತನ ಒಳಗೊಂಡಿರುತ್ತದೆ. ಮತ್ತು ಕ್ರ.ಸಂ. 9, 18, & 20 ರಲ್ಲಿನ ಸಂಸ್ಥೆಗಳಿಗೆ ಬಿಡುಗಡೆ ಮಾಡಿರುವ ಮೊತ್ತದಲ್ಲಿ ಮಾರ್ಚ್ 2013 ಹಾಗೂ ಮೇ 2013 ರ ವೇತನ ಒಳಗೊಂಡಿರುತ್ತದೆ. ಹಾಗೂ ಕ್ರಸಂ. 21 & 22 ರಲ್ಲಿನ ಸಂಸ್ಥೆಗಳಿಗೆ ಏಪ್ರಿಲ್ 2013 ಮತ್ತು ಮೇ 2013 ವೇತನ ಬಿಡುಗಡೆ ಮಾಡಲಾಗಿದೆ**

ಷರತ್ತು ಮತ್ತು ನಿಬಂಧನೆಗಳು:

[1] ಮೇಲ್ಕಂಡ ಮುಂಗಡ ವೇತನಾನುದಾನ ಬಿಡುಗಡೆಯು ತಾಂತ್ರಿಕ ಶಿಕ್ಷಣ ಇಲಾಖೆಯ ಕೂಲಂಕಷ ಲೆಕ್ಕ ತಪಾಸಣೆಗೆ ಒಳಪಟ್ಟಿರುತ್ತದೆ.

[2] ಹೆಚ್ಚಿನ ಅನುದಾನವು ಕ್ಲೇಮು ಮಾಡಿರುವುದು ಮತ್ತು ಬಿಡುಗಡೆಯಾಗಿರುವುದು ಕಂಡುಬಂದಲ್ಲಿ, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ನಿರ್ಧರಿಸುವ ರೀತಿಯಲ್ಲಿ ವಸೂಲಾತಿಗೆ ಕ್ರಮ ತೆಗೆದುಕೊಳ್ಳಲಾಗುವುದು.

[3] ಪ್ರಿನ್ಸಿಪಾಲರು ಸಿಬ್ಬಂದಿ ವರ್ಗದವರಿಗೆ ವೇತನವನ್ನು ವಿತರಿಸುವ ಮುನ್ನ ಸಾರ್ವಜನಿಕ ಶಿಕ್ಷಣ ಇಲಾಖೆಯು ವಿಧಿಸಿರುವ ಎಲ್ಲಾ ನಿಬಂಧನೆಗಳನ್ನು ಪೂರೈಸಿರುವ ಬಗ್ಗೆ ಖಚಿತ ಪಡಿಸಿಕೊಳ್ಳತಕ್ಕದ್ದು.

[4] ಮೇಲ್ಕಂಡ ಅನುದಾನಿತ ಚಿತ್ರಕಲಾ ಮಹಾವಿದ್ಯಾಲಯಗಳ ಪೈಕಿ ನಿರ್ವಹಣ ಅನುದಾನ ಪಡೆಯದೇ ಇರುವ ಸಂಸ್ಥೆಗಳು 2012-13 ನೇ ಸಾಲಿನಲ್ಲಿ ಸಂಗ್ರಹಿಸಿರುವ ಬೋಧನ ಶುಲ್ಕದ ಶೇ.50 ರಷ್ಟನ್ನು ಖಜಾನೆಗೆ ಪಾವತಿಸಿರುವ ಚಲನ್ ಪ್ರತಿಯನ್ನು ಈ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ.

[5] ಈ ಆದೇಶದಲ್ಲಿ ಬಿಡುಗಡೆಗೊಂಡಿರುವ ಅನುದಾನದ ವೆಚ್ಚವನ್ನು "2203-ತಾಂತ್ರಿಕ ಶಿಕ್ಷಣ –

00–104–ಸರ್ಕಾರೇತರ ತಾಂತ್ರಿಕ ಕಾಲೇಜು ಮತ್ತು ಸಂಸ್ಥೆಗಳಿಗೆ ಸಹಾಯ–0–09–ಲಲಿತಕಲಾ ಮಹಾವಿದ್ಯಾಲಯಗಳು [2203–00–104–0–09] ಯೋಜನೇತರ ಲೆಕ್ಕಶೀರ್ಷಿಕೆಯಡಿ 2013–2014 ನೇ ಸಾಲಿನಲ್ಲಿ ಒದಗಿಸಿರುವ ಆಯವ್ಯಯದಲ್ಲಿ ಭರಿಸತಕ್ಕದ್ದು.

[6] ಪ್ರಪತ್ರ ಕ.ಆ.ಸಂ.–3 ಅನುಚ್ಛೇದ–24ರಲ್ಲಿ ನಿಗದಿಪಡಿಸಿರುವ ನಮೂನೆಯಲ್ಲಿ ಅನುದಾನದ ಬಿಲ್ಲನ್ನು ತಯಾರಿಸಿ ಸಲ್ಲಿಸತಕ್ಕದ್ದು.

[7] 2011–12 ನೇ ಸಾಲಿನಲ್ಲಿ ಇಲಾಖೆಯಿಂದ ಬಿಡುಗಡೆಯಾಗಿರುವ ಅನುದಾನದ ಬಗ್ಗೆ 'ಬಳಕೆ ಪ್ರಮಾಣಪತ್ರ' ಹಾಗೂ 'ಸಿಎ' ದೃಢೀಕೃತ ಲೆಕ್ಕಪರಿಶೋಧನಾ ವರದಿಯನ್ನು ಕ.ಆ.ಸಂಹಿತೆ ಅನುಚ್ಛೇದ 161ರ ಅನ್ವಯ ಇಲಾಖೆಗೆ ಸಲ್ಲಿಸತಕ್ಕದ್ದು.

ನಿರ್ದೇಶಕರು.

ಇವರಿಗೆ,

ಮೇಲ್ಕಂಡ ಪಟ್ಟಿಯಲ್ಲಿ ಕಾಣಿಸಿರುವ ಚಿತ್ರಕಲಾಶಾಲೆ/ ಮಹಾವಿದ್ಯಾಲಯಗಳ ಪ್ರಿನ್ಸಿಪಾಲರುಗಳಿಗೆ ಸೂಕ್ತ ಕ್ರಮಕ್ಕಾಗಿ.

ಪ್ರತಿ ಇವರುಗಳಿಗೆ:

[1] ಮಹಾಲೇಖಪಾಲರು[ಎ&ಇ], ಕರ್ನಾಟಕ, ಬೆಂಗಳೂರು.
[2] ಸ್ಪೆಷಲ್ ಸೆಲ್, ಮಹಾಲೇಖಪಾಲರ ಕಚೇರಿ, ಕರ್ನಾಟಕ, ಬೆಂಗಳೂರು.
[3] ಲೆಕ್ಕಾಧಿಕಾರಿಗಳು[ಟಿಬಿಎಸ್], ನಿರ್ದೇಶನಾಲಯ, ಬೆಂಗಳೂರು.
[4] ಲೆಕ್ಕಾಧಿಕಾರಿಗಳು[ಬಿಲ್ಸ್], ನಿರ್ದೇಶನಾಲಯ, ಬೆಂಗಳೂರು.
[5] ಆಡಳಿತಾಧಿಕಾರಿಗಳು, ನಿರ್ದೇಶನಾಲಯ, ಬೆಂಗಳೂರು.
[6] ನಿರ್ದೇಶನಾಲಯದ ಆರ್‌ಇಸಿ[2], ಐಎನ್‌ಎಸ್, ಬಿಎಲ್‌ಎಸ್[3], ನಗದು ಶಾಖೆಗಳಿಗೆ.